

# ಬೆರಗಿನ ಬೊಂಬೆಯರಮನೆ



ನ್ಯೂಯಾರ್ಕ್ ನಗದಲ್ಲಿರುವ ಗೊಂಬೆ ಮನೆಯೊಂದರ ಬೆಲೆ ಕೇಳಿದರೆ ನೀವು ಹೌಹಾರುವುದು ಖಂಡಿತ. ಇಡೀ ಪ್ರಪಂಚದಲ್ಲೇ ಅತ್ಯಂತ ಬೆಲೆಯುಳ್ಳ ಗೊಂಬೆಯರಮನೆಯ ಬೆಲೆ 8.5 ಮಿಲಿಯನ್ ಡಾಲರ್. ಅಂದರೆ ಸುಮಾರು 54,81,65,000 ರೂಪಾಯಿಗಳು!

ಇದು ನ್ಯೂಯಾರ್ಕ್ ನಗರದಲ್ಲಿ ಪೀಠೋಪಕರಣಗಳಿರುವ ವಾಸದ ಮನೆಗಿಂತ ಹೆಚ್ಚು ಬೆಲೆಯುಳ್ಳದ್ದು! 9 ಅಡಿ ಎತ್ತರ, 29 ರೂಮುಗಳಿರುವ ಈ ಡಾಲ್ ಹೌಸ್ 800 ಟನ್ ತೂಕವಿದೆ. ಈ ಬೊಂಬೆ ಮನೆಯಲ್ಲಿ 10,000 ದಷ್ಟು, ಒಂದಕ್ಕಿಂತ ಒಂದು ಚಂದ ಎನ್ನಿಸುವ ಮಿನಿಯೇಚರ್ ಪೀಠೋಪಕರಣಗಳಿವೆ! ಪ್ರತಿಯೊಂದು ಕೋಣೆಯೂ ಕುರ್ಚಿ, ಮೇಜು, ದೀಪ ಮುಂತಾದವುಗಳ ಜೊತೆಗೆ ಅತ್ಯಂತ ಬೆಲೆಬಾಳುವ ಕಲಾತ್ಮಕ ವಸ್ತುಗಳಿಂದ ಅಲಂಕರಿಸಲ್ಪಟ್ಟಿವೆ. ಕೆಲಸ ನಿರ್ವಹಿಸುವ ಅಗ್ಗಿಷ್ಟಿಕೆ, ಬಣ್ಣದ ಗಾಜಿನ ಪ್ಯಾನಲ್‌ಗಳು, ವರ್ಣಚಿತ್ರಗಳು, ಕನ್ನಡಿಗಳು, ಚಿನ್ನದ ದೀಪಗುಚ್ಛ, ಉಣ್ಣೆ ಹೊದಿಕೆಗಳು, ಕರ್ಟನ್‌ಗಳು, ನೆಲಹಾಸು, ಅತ್ಯಂತ ಪುರಾತನ ಬೈಬಲ್ ಅಲ್ಲದೆ 100 ವರ್ಷಗಳಿಗೂ ಹಳೆಯದಾದ ಅತ್ಯಂತ ಅಪರೂಪದ ಪುಸ್ತಕಗಳು ಸಹ ಪುಟ್ಟ ಪುಟ್ಟ ಗಾತ್ರದಲ್ಲಿವೆ.

ಪ್ರಪಂಚದಾದ್ಯಂತ ಕಲಾವಿದರ ಕೈಯಿಂದಲೇ ತಯಾರಾಗಿರುವ ಅತ್ಯಂತ ಸೂಕ್ಷ್ಮ ಹಾಗೂ ನಿಖರವಾಗಿರುವ ಕಲಾಕೃತಿಗಳು ಇಲ್ಲಿವೆ. ಇದನ್ನು ಸೃಷ್ಟಿಸಿದ್ದು ಕೊಲೆರೆಡೊ ಮೂಲದ ಮಿನಿಯೇಚರ್ ಕಲಾವಿದೆ ಎಲೆನ್ ಡಿಯೆಲ್. ಇದನ್ನು ರಚಿಸಲು ಈಕೆಗೆ ಸ್ಫೂರ್ತಿ ನೀಡಿದ್ದು ಆಲ್ಫ್ರೆಡ್ ಟೆನ್ನಿಸನ್ ಕವಿಯ 'ಲೇಡಿ ಆಫ್ ದಿ ಲೇಕ್' ಎಂಬ ಕವನ.

ಹದಿಮೂರು ವರ್ಷಗಳ ಕಾಲ 1974 ಮತ್ತು 1987ನೇ ಇಸವಿಯಲ್ಲಿ ಜಗತ್ತಿನಾದ್ಯಂತ ಇರುವ ಪರಿಣಿತ ಮಿನಿಯೇಚರ್ ಕಲಾವಿದರೆಲ್ಲರ ನೆರವಿನಿಂದ ಈ ಸುಂದರ ಗೊಂಬೆಯರಮನೆಯನ್ನು ಎಲೆನ್ ಡಿಯೆಲ್ ನಿರ್ಮಿಸಿದ್ದಾಳೆ. ದುರಾದೃಷ್ಟವಶಾತ್ ಈ ಬೊಂಬೆಯರಮನೆಯನ್ನು ಸಾರ್ವಜನಿಕ ವೀಕ್ಷಣೆಗೆ ಇಟ್ಟಿಲ್ಲ. ಕಳೆದೆರಡು ವರ್ಷಗಳ ಹಿಂದೆ ನ್ಯೂಯಾರ್ಕ್‌ನಲ್ಲಿ ನಾಲ್ಕು ವಾರ ಪ್ರದರ್ಶನಗೊಂಡಿದ್ದ ರೀತಿಯಲ್ಲಿ ಈ ಬೆರಗಿನ ಬೊಂಬೆಯರಮನೆಯು ಅತ್ಯಂತ ಅಪರೂಪವಾಗಿ ಸಾರ್ವಜನಿಕ ವೀಕ್ಷಣೆಗೆ ಸಿಗುತ್ತದೆ.

■ ವಿದ್ಯಾ ವಿ. ಹಾಲಭಾವಿ